ನಿರ್ಲಕ್ಷ್ಯದಿಂದ ಇಂಥದ್ದು ಆಗುತ್ತದೆ. ಅದಕ್ಕೆ ನಾನು ಸದಸ್ಯರಲ್ಲಿ ತಮ್ಮೂಲಕ ಕೇಳಿಕೊಳ್ಳುವುದು ಒಂದು ಹೊಸ ವ್ಯವಸ್ಥೆಯನ್ನು ನಿನ್ನೆಯಿಂದ ತಾನೇ ಪ್ರಾರಂಭ ಮಾಡಿದ್ದೇವೆ. Within 48 hours, any such problems will be attended to ಅದರಿಂದ ಸ್ವಲ್ಪ ಅವಕಾಶವನ್ನು ಕೊಟ್ಟು ನೋಡಿ. We are covering the lorry loaded with garbageಗೆ ಟಾರ್ಪಾಲಿನ್ ಮುಂತಾದವುಗಳನ್ನು ಹಾಕಿ ಎಲ್ಲಾ ಲಾರಿಗಳನ್ನು ಕವರ್ ಮಾಡುತ್ತಿದ್ದೇವೆ. Just yesterday, the whole new programme has started. ಅಂದರೆ ಎಲ್ಲಾ ಕಡೆ ಕಸ ಸಾಗಾಣಿಕೆ ಮುಂತಾದ ಕಡೆ 48 ಗಂಟೆಗಳಲ್ಲಿ ಅವರು ಅದನ್ನು ಅಟೆಂಡ್ ಮಾಡಬೇಕು. ರಸ್ತೆ ಮತ್ತು ಮಳೆ ನೀರಿನ ಚರಂಡಿ ದುರಸ್ತಿ ಒಂದು ವಾರದೊಳಗೆ, ಪಾದಚಾರಿಗಳ ರಸ್ತೆಗಳ ನಿರ್ವಹಣೆ ಎರಡು ದಿವಸದಲ್ಲಿ, ರಸ್ತೆ ಗುಂಡಿಗಳ ದುರಸ್ಥಿ 24 ಗಂಟೆಗಳಲ್ಲಿ ಹೀಗೆ ಟೈಮ್ ಲಿಮಿಟ್ ಹಾಕಿಕೊಂಡು ಕೆಲಸ ಮಾಡುವ ಒಂದು ಕಾರ್ಯಕ್ರಮ ನಿವಾರಣೆ ಎಂದು ನಿನ್ನೆಯಿಂದ ಪ್ರಾರಂಭವಾಗಿದೆ. ನಾನು ಆಶಿಸುತ್ತಿದ್ದೇನೆ, ಈ ರೀತಿಯ ಸಮಸ್ಯೆ ಇನ್ನು ಮುಂದೆ ಬರಲಾರದು ಎಂದು

MR. SPEAKER : Wish you all the best.

ವಿರಾಜಪೇಟೆ ತಾಲ್ಲೂಕು ಕೊಂಗಣ ಏತ ನೀರಾವರಿ

455 - ಶ್ರೀ ಹೆಚ್. ಬಸವರಾಜು (ವಿರಾಜಪೇಟೆ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿರಾಜಪೇಟೆ ತಾಲ್ಲೂಕು ಕೊಂಗಣ ಏತ ನೀರಾವರಿ ಯೋಜನೆ ಅನುಷ್ಠಾನಗೊಳಿಸಲು ಸರ್ಕಾರ ಯಾರ ಕಾರ್ಯಕ್ರಮ ಹಾಕಿಕೊಂಡಿದೆ?

ಆ) ಈ ಯೋಜನೆಯು ಯಾವ ಹಂತದಲ್ಲಿದೆ?

ಇ) ಸದರಿ ಯೋಜನೆ ಕೈಗೊಳ್ಳಲು ಅಂದಾಜು ವೆಚ್ಚ ಎಷ್ಟಾಗುತ್ತದೆ? ಈ ಯೋಜನೆಗೆ ಸರ್ಕಾರ ಎಷ್ಟು ಹಣ ವೆಚ್ಚ ಮಾಡಲು ನಿರ್ಧರಿಸಿದೆ? (ಈ ಬಗೆಗಿನ ಕಾರ್ಯಸೂಚಿ ನೀಡುವುದು)

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು) :

ಅ) ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ಪರಿಶೀಲಿಸಲಾಗುತ್ತಿದೆ.

ಆ) ಈ ಯೋಜನೆಯ ಪೂರ್ವಭಾವಿ ತನಿಖೆಯನ್ನು ನಡೆಸಬೇಕಾಗಿದೆ.

ಇ) ಈ ಕಾಮಗಾರಿಯ ಅಂದಾಜು ಪಟ್ಟಿ ಇನ್ನೂ ತಯಾರಾಗಬೇಕಾಗಿದೆ.

ಶ್ರೀ ಹೆಚ್. ಡಿ ಬಸವರಾಜು : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ನಾನು ಕೇಳಿರುವ ಪ್ರಶ್ನೆ ಕೊಂಗಣ ಏತ ನೀರಾವರಿ ಬಗ್ಗೆ ಕೇಳಿದ್ದೇನೆ. ಈ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ, ಪರಿಶೀಲಿಸ

-ಲಾಗುತ್ತಿದೆ ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಗೆ ಒಂದು ವಿಚಾರವನ್ನು ತಿಳಿಸುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಜನತಾ ಸರ್ಕಾರ ಇದ್ದಾಗ, ಹೆಚ್.ಡಿ..ದೇವೇಗೌಡರು ಇದೇ ಒಂದು ಪ್ರದೇಶಕ್ಕೆ ಭೇಟಿ ನೀಡಿ ಅಲ್ಲಿ ಅಡಿಗಲ್ಲನ್ನು ಹಾಕಿದ್ದರು. ಬಹುಶಃ ಇದು ಪರಿಶೀಲನೆಯ ಹಂತ ಎಂದರೆ ಅಡಿಗಲ್ಲನ್ನು ಹಾಕಿದ್ದಾರೆ, ಮತ್ತೆ ಈ ಕಾಮಗಾರಿಗೆ ಅಂದಾಜು ಪಟ್ಟಿ ಇನ್ನು ತಯಾರಾಗಬೇಕಾಗಿದೆ ಎಂದರೆ ಇದರ ಬಗ್ಗೆ ತಾವು ಬೆಳಕನ್ನು ಚೆಲ್ಲಬೇಕು. ಅವರು ಭೇಟಿ ನೀಡಿದ ಮೇಲೆ ಕೊಂಗಣ ಏತ ನೀರಾವರಿಗೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡರು? ಆ ಒಂದು ಫೈಲ್, ಆ ಕಡತ ಎಲ್ಲಿಗೆ ಹೋಗಿದೆ? ಅದರ ಬಗ್ಗೆ ವಿವರವಾಗಿ ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ನಾವು ಆಗಲೇ ಉತ್ತರ ಕೊಟ್ಟಿದ್ದೇವೆ. ಮಾನ್ಯ ದೇವೇಗೌಡರು ಹೋಗಿ ಅಲ್ಲಿ ಕಲ್ಲು ಹಾಕಿರುವುದು, ಇದು ನನಗೆ ಮಾಹಿತಿ ಇರಲಿಲ್ಲ. ಅದೇನೇ ಮಾಹಿತಿ ಇದ್ದರೂ ಆದಷ್ಟು ಜಾಗ್ರತೆ ತರಿಸಿ ಅದರ ಬಗ್ಗೆ ಸಂಪೂರ್ಣವಾದ ಒಂದು ವರದಿಯನ್ನು ನಾನು ಸನ್ಮಾನ್ಯ ಸದಸ್ಯರಿಗೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಹೆಚ್. ಡಿ. ಬಸವರಾಜು : ಇನ್ನೊಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಏಕೆಂದರೆ ತಪ್ಪು ದಾರಿಗೆ ಮಂತ್ರಿಗಳನ್ನು ಅಧಿಕಾರಿವರ್ಗದವರು ಎಳೆಯುತ್ತಿದ್ದಾರೆ. ಈ ಯೋಜನೆ ಯಾವ ಹಂತದಲ್ಲಿದೆ ಎಂದರೆ ಯೋಜನೆಯ ಪೂರ್ವಭಾವಿ ತನಿಖೆಯನ್ನು ನಡೆಸಬೇಕಾಗಿದೆ ಅಂದರೆ ನಡೆಸಿದ ತನಿಖೆ ಆ ಕಡತ ಬಿದ್ದು ಹೋಯಿತೇ? ಈಗ ಹೊಸದಾಗಿ ಏನಾದರೂ ತನಿಖೆಯನ್ನು ಮಾಡುತ್ತೀರೋ?

ಅಧ್ಯಕ್ಷರು : ಮಾನ್ಯ ಬಸವರಾಜ್‌ರವರೇ ಇಲ್ಲಿ ಸ್ವಲ್ಪ ಕೇಳಿ ಪ್ರಶ್ನೆಯನ್ನು ನಾನು ನೋಡಿದ್ದೇನೆ. ಅದಕ್ಕೆ ಮಂತ್ರಿಗಳು ಏನು ಹೇಳಿದರು ಎಂದರೆ ಇದುವರೆಗೂ ಕಾರ್ಯಕ್ರಮ ಹಾಕಿಕೊಂಡಿಲ್ಲ. ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ತಾವು ಮತ್ತೆ ಉಪ ಪ್ರಶ್ನೆ ಮುಖಾಂತರ ಹೇಳಿದಿರಿ, ಮಾನ್ಯ ದೇವೇಗೌಡರು ಬಂದು ಇದಕ್ಕೆ ಅಡಿಗಲ್ಲನ್ನು ಹಾಕಿದರು ಎಂದು. ಆ ವಿಚಾರ ಅವರಿಗೆ ಗೊತ್ತಿರಲಿಲ್ಲ. ಅದಕ್ಕೆ ಅವರು ಹೇಳಿದರು, ಏನು ಇದೆ, ಎಲ್ಲಾ ಪೂರ್ಣ ವಿಚಾರವನ್ನು ನಾನು ತಿಳಿದುಕೊಳ್ಳುತ್ತೇನೆ ಎಂದು. ಒಂದು ವೇಳೆ ದೇವೇಗೌಡರು ಅಡಿಗಲ್ಲನ್ನು ಹಾಕುವ ವೇಳೆಗೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗದೇ ಇದ್ದಿದ್ದರೆ ಅಥವಾ ಆಗಿ ಎಲ್ಲಾ ಅಡಿಗಲ್ಲನ್ನು ಹಾಕಿದ್ದರೆ ಮತ್ತೆ ಅವರು ಮಿಸ್‌ಗೈಡ್ ಮಾಡಿದರೆ....

ಶ್ರೀ ಹೆಚ್. ಡಿ. ಬಸವರಾಜು : ಆಯಿತು ಸಾರ್. ಆ ರೀತಿ ಇತ್ತು ಎಂದರೆ ಇನ್ನು ಎಷ್ಟು ದಿವಸದಲ್ಲಿ ಇದರ ಬಗ್ಗೆ ಕಾರ್ಯಕ್ರಮವನ್ನು ನೀವು ರೂಪಿಸಿಕೊಳ್ಳುತ್ತೀರಿ?

ಅಧ್ಯಕ್ಷರು : ಟೈಮ್ ಕೊಡಿ. ಇಷ್ಟೇ ದಿವಸ ಇದಕ್ಕೆ ವಾರ, 11 ದಿವಸ, 14 ದಿವಸ ಎಂದು ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್. ಡಿ. ಬಸವರಾಜು : ಅಧ್ಯಕ್ಷರ ಮೂಲಕ ನಾನು ಏತಕ್ಕೆ ಕೇಳಿಕೊಳ್ಳುತ್ತಿದ್ದೇನೆ ಎಂದರೆ ಸುಮಾರು 10-11 ವರ್ಷಗಳಿಂದ ಇದು ಬಿದ್ದು ಹೋಗಿದೆ?

MR. SPEAKER : He will take action.

ಶ್ರೀ ಹೆಚ್. ಡಿ. ಬಸವರಾಜು : ಇನ್ನೊಂದು ಉಪ ಪ್ರಶ್ನೆ. ಈಲ್ಲಿ ತೋಡಿನಲ್ಲಿ ಸುಮಾರು ನೂರು ಕುಟುಂಬಗಳು ಇವೆ. ಅಲ್ಲಿ ಮರುಳು ಬಂದು ಜಮೀನು ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡಿದೆ. ನಾವು ಗದ್ದೆ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ ನಾನು ಒಂದು ನಿಯೋಗದ ಜೊತೆ ಮಂತ್ರಿಗಳ ಹತ್ತಿರ ಭೇಟಿಯಾಗಿದ್ದೆ. ಇದುವರೆಗೂ ಯಾವುದು ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ದಯವಿಟ್ಟು ಆ ಕಾರ್ಯಕ್ರಮದ ಬಗ್ಗೆ ಈ ಒಂದು ಸದನದಲ್ಲಿ ಸ್ಪಷ್ಟ ಹೇಳಿಕೆಯನ್ನು ಕೊಡಬೇಕೆಂದು ತಮ್ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಪ್ರಶ್ನೋತ್ತರದಲ್ಲಿ ಖಚಿತವಾಗಿ ನೀವು ಯಾವುದು ಕೇಳಿರುತ್ತೀರಿ, ಅದಕ್ಕೆ ಅವರು ತಯಾರಾಗಿ ಬಂದಿರುತ್ತಾರೆ. ಬೇರೆಯದು ಕೇಳಿದರೆ ಅವರು ನೋಟೀಸ್ ಕೊಡಿ ಎಂದು ಕೇಳುತ್ತಾರೆ.

ಶ್ರೀ ಹೆಚ್. ಡಿ. ಬಸವರಾಜು : ಇದು ಅವರಿಗೆ ಗೊತ್ತಿರುವುದರಿಂದ ಕೇಳುತ್ತಿದ್ದೇನೆ. ಗೊತ್ತಿಲ್ಲದಿದ್ದರೆ ನಾನು ಕೇಳುತ್ತಿರಲಿಲ್ಲ. ಸದನದಲ್ಲಿ ಅವರು ಒಂದು ಹೇಳಿಕೆ ಕೊಡಲಿ ಎಂದು ನಾನು ತಮ್ಮೂಲಕ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಸುರೇಶ್‌ಕುಮಾರ್ : ಮಾನ್ಯ ಸಭಾಧ್ಯಕ್ಷರೇ, ನಮಗೆಲ್ಲಾ ಮೈಸೂರಿನಲ್ಲಿ ಟ್ರೈನಿಂಗನ್ನು ಕೊಟ್ಟಿರಿ. ಸಚಿವರಿಗೆ ಇಲ್ಲಿಯೇ ಟ್ರೈನಿಂಗನ್ನು ಕೊಡುತ್ತಿದ್ದೀರೋ?

ಶ್ರೀ ಐ. ಎಂ. ಜಯರಾಮ ಶೆಟ್ಟಿ : ಅವರು ಪರಿಶೀಲನೆ ಮಾಡುತ್ತೇನೆ ಎಂದು ಹೇಳಲಿ. ತಾವು ಮಾಡುತ್ತೇನೆ ಎಂದು ಹೇಳುತ್ತಿದ್ದೀರಾ?

ಅಧ್ಯಕ್ಷರು : ಗೊತ್ತಿದ್ದರೆ ಹೇಳಿ.

ಶ್ರೀ ಕುಂಬೈ ಸುಂದರ್‌ರಾವ್ : ಮಾನ್ಯ ಅಧ್ಯಕ್ಷರೇ, ನಿನ್ನೆ ಒಂದು ಕಡೆ ಹೋಗಿದ್ದೆ ಊಟದ ಹೊತ್ತು ಅವರು ಹೇಳಿದರು ನೀವು ಊಟ ಮಾಡಿಯೇ ಬಂದಿರಬೇಕಲ್ಲಾ ಎಂದು. ನನ್ನದು ಊಟ ಆಗಿರಲಿಲ್ಲ. ಹೌದು ಎಂದು ಹೇಳಲಿಕ್ಕಾಗಲಿಲ್ಲ, ಬಾಯಿ ಮುಚ್ಚಿ ಕುಳಿತೆ.

ಶ್ರೀ ತಿಪ್ಪೇಸ್ವಾಮಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇಳಿರುವ ಈ ಕಡತವನ್ನು ನಾನು ಆದಷ್ಟು ನನ್ನ ಅಧಿಕಾರಿಗಳಿಗೆ ಹೇಳಿ ಅವರ ಭಾವನೆ ಏನು ಇದೆ, ಅದಕ್ಕಿಂತ ಜಾಗ್ರತೆ ತರಿಸುವುದಕ್ಕೂ ನಾನು ಪ್ರಯತ್ನ ಮಾಡುತ್ತೇನೆ. ಸನ್ಮಾನ್ಯ ಸದಸ್ಯರು ಈ ಒಂದು ಕಾಮಗಾರಿ ಬಗ್ಗೆ ಮೊದಲೇ ನನ್ನ ಹತ್ತಿರ ಪ್ರಸ್ತಾಪ ಮಾಡಿದ್ದರೆ ಅವರಿಗೆ ಇಷ್ಟೊತ್ತಿಗೆ ಮಾಹಿತಿಯನ್ನು ನಾನು ಒದಗಿಸುತ್ತಿದ್ದೆ. ಮತ್ತೊಂದು ವಿಷಯ ಕೊಲ್ಲಿತೋಡು ಬಗ್ಗೆ ಮಳೆಯಿಂದ ಹಾನಿಯಾಗಿರುವುದಕ್ಕೆ ಪರಿಹಾರವನ್ನು ಕೊಡುವುದು ರೆವಿನ್ಯೂ ಡಿಪಾರ್ಟ್‌ಮೆಂಟ್.

ಶ್ರೀ ಹೆಚ್. ಡಿ. ಬಸವರಾಜು : ನಾನು ಪರಿಹಾರವನ್ನು ಕೇಳುತ್ತಿಲ್ಲ. ತಮ್ಮದೇ ಒಂದು ಇಲಾಖೆಯ ಕೊಲ್ಲಿತೋಡಿನಲ್ಲಿ ನೀರಿನಿಂದ ಏನಾಗಿದೆ, ಅಲ್ಲಿ ಬಂದಂಥ ಮರಳು ಸಂಪೂರ್ಣವಾಗಿ ಗದ್ದೆ ಬಯಲಿಗೆಲ್ಲಾ ಸ್ಪೈಡ್ ಆಗಿದೆ.

ಅಧ್ಯಕ್ಷರು : ಆಯಿತು. Let us not waste time.

ರಾಜ್ಯದಲ್ಲಿ ಮಹಿಳೆಯರಿಗೆ ಪ್ರತ್ಯೇಕ ಕಾರಾಗೃಹ

456 - ಶ್ರೀಮತಿ ಡಿ. ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಕಾರಾಗೃಹ, ಗೃಹರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ಕೇಂದ್ರ ಕಾರಾಗೃಹ ಹಾಗೂ ರಾಜ್ಯದ ಇತರೇ ಕಾರಾಗೃಹಗಳಲ್ಲಿ ಶಿಕ್ಷೆ ಅನುಭವಿಸುತ್ತಿರುವ ಮಹಿಳಾ ಖೈದಿಗಳ ಸಂಖ್ಯೆ ಎಷ್ಟು?*

ಆ) *ರಾಜ್ಯದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕೇಂದ್ರ ಕಾರಾಗೃಹ ಇದೆಯೇ?*

ಇ) *ಇಲ್ಲದಿದ್ದರೆ, ರಾಜ್ಯದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾರಾಗೃಹವನ್ನು ತೆರೆಯಲು ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ?*

ಶ್ರೀ ವಿ. ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು) :

ಅ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಇಲ್ಲ.

ಇ) ಇಲ್ಲ.